915(1081) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ): ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡದ ಕರಾವಳಿ ಭಾಗವು ರಾಜಧಾನಿ ಬೆಂಗಳೂರಿಗೆ ರೈಲು ಸಂಪರ್ಕದಿಂದ ವಂಚಿತವಾಗಿರುವುದರಿಂದ ಅಲ್ಲಿನ ಅಭಿವೃದ್ಧಿಗೆ ಹಿನ್ನೆಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಕೂಡಲೇ ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಉತ್ತರ ಕನ್ನಡ ಕರಾವಳಿ ಭಾಗದ ಸಂಪೂರ್ಣ ಅಭಿವೃದ್ಧಿಯ ಹಿತ ದೃಷ್ಟಿಯಿಂದ ಅಂಕೋಲ ರೈಲು ಮಾರ್ಗವನ್ನು ಆದ್ಯತೆಯ ಮೇರೆಗೆ ಗಂಭೀರವಾಗಿ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಲಾಗುವುದೇ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

ಅ) ಬಂದಿದೆ

ಆ) ಹುಬ್ಬಳ್ಳಿ-ಅಂಕೋಲ ಹೊಸ ಬ್ರಾಡ್‌ಗೇಜ್ ರೈಲು ಮಾರ್ಗವನ್ನು ವೆಚ್ಚ ಪಾಲುಗಾರಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದ್ದು, ಇದಕ್ಕಾಗಿ ಅಗತ್ಯವಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಇದರಲ್ಲಿ ಸುಮಾರು 720 ಹೆಕ್ಟೆರ್ ಪ್ರದೇಶವು ಅರಣ್ಯ ಭೂಮಿಯಾಗಿದ್ದು, ಇದರ ವರ್ಗಾವಣೆಗಾಗಿ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ಅನುಮೋದನೆಯನ್ನು ಕೋರಲಾಗಿದೆ ಈ ಭೂಮಿಯು ಅರಣ್ಯ ಇಲಾಖೆಯಿಂದ ಪಡೆಯಲಾಗುವುದೆಂಬ ಸದಾಶಯದಲ್ಲಿ ಹುಬ್ಬಳ್ಳಿ ಕಿರವತ್ತಿ ವಿಭಾಗದಲ್ಲಿ ಪ್ರಥಮ 48 ಕಿ.ಮೀ ಮಾರ್ಗದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಇದರಲ್ಲಿ 5 5 ಹೆಕ್ಟೆರ್ ಅರಣ್ಯ ಭೂಮಿಯು ಒಳಗೊಂಡಿದೆ ಇಲ್ಲಿಯವರೆಗೆ ಶೇ 30% ಭೂ ಕಾಮಗಾರಿ ಶೇ 60 ಸಣ್ಣ ಸೇತುವೆಗಳು ಹಾಗೂ ಶೇ 70 ಪ್ರಮುಖ ಸೇತುವೆಗಳ ಕಾಮಗಾರಿಯು ಮುಕ್ತಾಯಗೊಂಡಿವೆ

ಕೇಂದ್ರೀಯ ಅರಣ್ಯ ಮತ್ತು ಪರಿಸರ ಮಂತ್ರಾಲಯದ ಸಲಹಾ ಸಮಿತಿಯ ಮುಂದೆ ಪರಿಸರ ಸಂರಕ್ಷಣಾ ಕೇಂದ್ರವು ಸಲ್ಲಿಸಿದ ಮನವಿಯು ಬಾಕಿ ಇದೆ ಕರಾವಳಿಯ ಅಭಿವೃದ್ಧಿಗಾಗಿ ಹುಬ್ಬಳ್ಳಿ-ಅಂಕೋಲ ಮಾರ್ಗವನ್ನು ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರಕ್ಕೆ ಬಹಳಷ್ಟು ಬಾರಿ ಆಗ್ರಹಿಸಲಾಗಿದೆ

ಇ) ಇದಲ್ಲದೆ ತಾಳಗುಪ್ಪದಿಂದ ಹೊನ್ನಾವರ ತಾಲ್ಲೂಕಿನಲ್ಲಿ ಹಾಯ್ದು ಹೋಗುವ ಕೊಂಕಣ ರೈಲ್ವೆಗೆ ಜೋಡಣೆಯಾಗುವ ಹೊಸ ರೈಲು ಮಾರ್ಗ ಮಂಜೂರು ಮಾಡಲು ಸಹ ಕೇಂದ್ರ ಸರ್ಕಾರವನ್ನು ಕೋರಲಾಗಿದೆ

916(1082) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ಯಾಣ ಕ್ಷೇತ್ರವು ಪಶ್ಚಿಮ ಘಟ್ಟದ ಸೆರಗಿನಲ್ಲಿದ್ದು ಪ್ರಕೃತಿಯ ರಮ್ಯತಾಣವೂ ಹಾಗೂ ಪುರಾಣ ಪ್ರಸಿದ್ಧ ಸ್ಥಳವೂ ಆಗಿರುವುದರಿಂದ ಅತ್ಯುತ್ತಮ ಪ್ರವಾಸಿ ತಾಣವಾಗಿರುವುದು ಸರಕಾರದ ಗಮನದಲ್ಲಿದೆಯೇ,

ಆ) ಹಾಗಿದ್ದಲ್ಲಿ, ಇಲ್ಲಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ಒದಗಿಸಿ ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ,

ಇ) ರೆಸಾರ್ಟ್ ಮಾದರಿಯಲ್ಲಿ ಇದನ್ನು ಅಭಿವೃದ್ಧಿಪಡಿಸಲು ನರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಕುಮಟಾ ತಾಲ್ಲೂಕಿನ ಯಾಣದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ರೂ 8 00 ಲಕ್ಷಗಳ ವೆಚ್ಚದಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ

ಇ) ರೆಸಾರ್ಟ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಕೈಗೊಂಡಿರುವುದಿಲ್ಲ

917(1083) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ನಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ತದಡಿಯಲ್ಲಿನ ಉದ್ದೇಶಿತ ಉಷ್ಣ ವಿದ್ಯುತ್ ಸ್ಥಾವರವನ್ನು ಜೀವಿಸಂಕುಲ ಸಂರಕ್ಷಣೆಯ ಹಿತದೃಷ್ಟಿಯಿಂದ ಶಾಶ್ವತವಾಗಿ ಕೈಬಿಡಲಾಗಿದೆಯೇ,

ಆ) ಉದ್ದೇಶಿತ ಈ ಉಷ್ಣ ಸ್ಥಾವರವನ್ನು ವರಿನರ ದಕ್ಕೆಯಾಗದ ಬೇರೆ ಜಿಲ್ಲೆಗೆ ಯಾವುದಾದರೂ ಮತ್ತೊಂದು ಪ್ರದೇಶಕ್ಕೆ ವರ್ಗಾಯಿಸಲು ನರ್ಕಾರ ಕ್ರಮ ಕೈಗೊಳ್ಳುವುದೇ?